12. ಗಮನ ಸೆಳೆಯುವ ಸೂಚನೆ :

ವಿಷಯ : ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕ್ಯಾಂಪಸ್ ಅನ್ನು ನಿರ್ಮಿಸಲು ರಾಮನಗರ ತಾಲ್ಲೂಕಿನ ಅರ್ಚಕರಹಳ್ಳಿಯಲ್ಲಿನ 247 ಎಕರೆ ಪ್ರದೇಶದ ಜಮೀನು ನೀಡಿ ಆಡಳಿತಾತ್ಮಕ ಮಂಜೂರಾತಿ ನೀಡಿದ್ದರೂ ಸರ್ಕಾರವು ವಿಶ್ವವಿದ್ಯಾಲಯದ ಕಾಮಗಾರಿಯನ್ನು ಕೈಗೊಳ್ಳದಿರುವ ಬಗ್ಗೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕ್ಯಾಂಪಸ್ ಅನ್ನು ನಿರ್ಮಿಸಲು ರಾಮನಗರ ತಾಲ್ಲೂಕಿನ ಅರ್ಚಕರಹಳ್ಳಿಯಲ್ಲಿನ 247 ಎಕರೆ ಪ್ರದೇಶದ ಜಮೀನು ನೀಡಿ ಆಡಳಿತಾತ್ಮಕ ಮಂಜೂರಾತಿ ನೀಡಿದ್ದರೂ ಸರ್ಕಾರವು ವಿಶ್ವವಿದ್ಯಾಲಯದ ಕಾಮಗಾರಿಯನ್ನು ಕೈಗೊಳ್ಳದಿರುವ ಬಗ್ಗೆ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್.ಎ.ರಾಮದಾಸ್ (ವೈದ್ಯಕೀಯ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದೇನೆ.

ಸಚಿವ ಸಂಪುಟವು ದಿನಾಂಕ: 22.02.2007 ರ ಸಭೆಯಲ್ಲಿ ಅಂದಾಜು ರೂ.310.00 ಕೋಟಿಗಳ ವೆಚ್ಚದಲ್ಲಿ ಆರೋಗ್ಯ ನಗರವನ್ನು ಅಂದರೆ, ವೈದ್ಯಕೀಯ ವಿಶ್ವವಿದ್ಯಾಲಯ, ವೈದ್ಯಕೀಯ ಕಾಲೇಜು, ಡೆಂಟಲ್ ಕಾಲೇಜು, ನರ್ಸಿಂಗ್ ಕಾಲೇಜು, ಫಾರ್ಮಸಿ ಕಾಲೇಜು ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಇತರ ಪೂರಕ ಸಂಸ್ಥೆಗಳನ್ನು ಸ್ಥಾಪಿಸಲು ಮತ್ತು ಪ್ರಸ್ತುತ ಬೆಂಗಳೂರಿನಲ್ಲಿರುವ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವನ್ನು ರಾಮನಗರ ತಾಲ್ಲೂಕು, ಕನಬಾ ಹೋಬಳಿ, ಅರ್ಚಕರ ಹಳ್ಳಿಗೆ ಸ್ಥಳಾಂತರಿಸಲು ಅನುಮೋದನೆ ನೀಡಿರುತ್ತದೆ. ಅದರನ್ವಯ ಸರ್ಕಾರವು ಆದೇಶ ಸಂಖ್ಯೆ: ಆಕುಕ 117 ಎಂಪಿಎಸ್ 2007, ದಿನಾಂಕ: 24.03.2007 ರಲ್ಲಿ ರಾಮನಗರದಲ್ಲಿ ಆರೋಗ್ಯ ನಗರವನ್ನು ಪ್ರಾರಂಭಿಸಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಆರೋಗ್ಯ ನಗರವನ್ನು ಸ್ಥಾಪಿಸುವ ಸಲುವಾಗಿ ಒಟ್ಟು 247 ಎಕರೆ 20 ಗುಂಟೆಗಳ ಜಮೀನನ್ನು ರೂ.310.00 ಕೋಟಿಗಳ ಅಂದಾಜು ಮೌಲ್ಯಕ್ಕೆ ನಿಗದಿಗೊಳಿಸಲಾಗಿದೆ.

ತದನಂತರ, 216 ಎಕರೆ 24 ಗುಂಟೆಗಳ ಜಮೀನಿನಲ್ಲಿ 71 ಎಕರೆ 15 ಗುಂಟೆಗಳ ಜಮೀನನ್ನು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಮತ್ತು 145 ಎಕರೆ 09 ಗುಂಟೆಗಳ ಜಮೀನನ್ನು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯಕ್ಕೆ ಅನುಕ್ರಮವಾಗಿ ಕಾದಿರಿಸಲಾಗಿದೆ.

ರಾಮನಗರದಲ್ಲಿ ಆರೋಗ್ಯ ನಗರವನ್ನು ಸ್ಥಾಪಿಸಿರುವ ಸಂಬಂಧ 187 ಎಕರೆ 20 ಗುಂಟೆಗಳ ಜಮೀನನ್ನು ಹಾಗೂ ಸರ್ಕಾರಿ ಖರಾಬು 60.18 ಎಕರೆ ಸೇರಿದಂತೆ ಒಟ್ಟು 247.20 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಸಲುವಾಗಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಭೂ ಸ್ವಾದೀನ ಕಾಯ್ದೆಯ ಕಲಂ 3(1), 1(3) ಹಾಗೂ 28 (1) ರಡಿ ದಿನಾಂಕ: 27.02.2007 ರಂದು ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಈ ಪೈಕಿ 175 ಎಕರೆ 11 ಗಂಟೆ ಹಿಡುವಳಿ ಜಮೀನು ಹಾಗೂ 41 ಎಕರೆ 15 ಗುಂಟೆ ಸರ್ಕಾರಿ/ಖರಾಬು ಜಮೀನು ಸೇರಿದಂತೆ ಒಟ್ಟು 216 ಎಕರೆ 26 ಗುಂಟೆ ಜಮೀನನ್ನು ಅಂತಿಮವಾಗಿ ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಕಲಂ 28(4) ರಡಿ ದಿನಾಂಕ:18.06.2007ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ.

ಆರೋಗ್ಯ ನಗರವನ್ನು ರಾಮನಗರದಲ್ಲಿ ಸ್ಥಾಪಿಸಿ ನಿರ್ಮಾಣ ಮಾಡಲು ಗುತ್ತಿಗೆದಾರರಾದ ಮೆ:ನಾಗಾರ್ಜುನ ಕನ್‌ಸ್ಟ್ರಕ್ಷನ್ ಕಂಪನಿ ಲಿಮಿಟೆಡ್ ಇವರಿಗೆ ರೂ.333.77 ಕೋಟಿಗಳ ಟೆಂಡರ್ ಮೊತ್ತದ ಪೈಕಿ ಶೇ.10 ರಷ್ಟು ಅಂದರೆ ರೂ.33.37 ಕೋಟಿಗಳನ್ನು mobilization ಮುಂಗಡ ಪಾವತಿಸಲಾಗಿತ್ತು. ಆದರೆ, ಭೂಮಿ ಹಸ್ತಾಂತರಗೊಂಡು ಕಾಮಗಾರಿ ಪ್ರಾರಂಭವಾಗದಿದ್ದ ಕಾರಣ ಸದರಿ ಮೊತ್ತವನ್ನು ಗುತ್ತಿಗೆದಾರರಿಂದ ಹಿಂಪಡೆದು ದಿನಾಂಕ: 05.07.2008 ರಂದು ಸರ್ಕಾರಿ ಖಜಾನೆಗೆ ಜಮಾ ಮಾಡಲಾಗಿದೆ. ಆದರೆ, ಗುತ್ತಿಗೆಯನ್ನು ರದ್ದುಮಾಡಿಲ್ಲ. ಗುತ್ತಿಗೆ ಕರಾರಿನಂತೆ ಭೂಮಿಯನ್ನು ಹಸ್ತಾಂತರಿಸಿದ ದಿನಾಂಕದಿಂದ ಕಾರ್ಯಾರಂಭ ಮಾಡುವುದಾಗಿ ಗುತ್ತಿಗೆದಾರರು ಪತ್ರ ನೀಡಿದ್ದಾರೆ.

ಯೋಜನೆಗೆ ಸಂಬಂಧಿಸಿದಂತೆ ವಿವರಗಳು ಕೆಳಕಂಡಂತಿವೆ:

ಆಡಳಿತಾತ್ಮಕ ಅನುಮೋದನೆ	ಸರ್ಕಾರದ ಆದೇಶ ಸಂಖ್ಯೆ:ಆಕುಕ 117 ಎಂಪಿಎಸ್ 2007 (ಭಾಗ–2), ದಿನಾಂಕ: 14.05.2007
ತಾಂತ್ರಿಕ ಮಂಜೂರಾತಿ	CER:111:07-08, ದಿನಾಂಕ:20.06.2007
ಟೆಂಡರ್ ಪ್ರಕಟಣೆ	No. 85/2006-078, ದಿನಾಂಕ: 16.03.2007
ಟೆಂಡರ್ ಪ್ರಕಟಣೆ ಮುಂದುವರಿಕೆ – 1	30.04.2007
ಟೆಂಡರ್ ಪ್ರಕಟಣೆ ಮುಂದುವರಿಕೆ – 2	24.05.2007
ಟೆಂಡರ್ ಸ್ವೀಕೃತಿ ದಿನಾಂಕ	28.05.2007
ಟೆಂಡರ್ ತೆರೆದ ದಿನಾಂಕ	04.06.2007
ಟೆಂಡರ್‌ದಾರರು	1. L & T 2. NCCL 3. IVRCL ಮೇಲಿನ ಮೂವರು ಟೆಂಡರ್‌ದಾರರ ಪೈಕಿ M/s. NCCL ನಮೂದಿಸಿದ ಟೆಂಡರ್ ದರವು ಅತ್ಯಂತ ಕಡಿಮೆ ಇದ್ದು, ಶೇ.27 ರಷ್ಟು ಎಸ್.ಆರ್. 2007–08 ದರಗಳ ಮೇಲೆ ಹೆಚ್ಚುವರಿಯಾಗಿರುತ್ತದೆ. ತದನಂತರ, ಸಂಧಾನದ ಮೂಲಕ ಶೇ.27 ರಿಂದ ಶೇ.18.61ದರಕ್ಕೆ ಇಳಿಸಿ, ಗುತ್ತಿಗೆ ಮೊತ್ತವನ್ನು ರೂ.333.77 ಕೋಟಿಗಳಿಗೆ ನಿಗದಿಗೊಳಿಸಿ, ಸರ್ಕಾರದ ಆದೇಶ ಸಂಖ್ಯೆ:ಲೋಇ 10 ಬಿಎಂಪಿ 2007, ದಿನಾಂಕ: 23.06.2007 ರಲ್ಲಿ ಅನುಮೋದನೆ ನೀಡಲಾಗಿದ್ದು, ಗುತ್ತಿಗೆ ಮೊತ್ತದ ಶೇ.10 ರಷ್ಟು mobilization

	advance ನೀಡಲಾಗಿದೆ.
ಕಾರ್ಯಾದೇಶ ದಿನಾಂಕ	No.16/2007-08, ದಿನಾಂಕ: 25.06.2007
EMD ಮೊತ್ತ	ರೂ.3.33 ಕೋಟಿ (ಒಟ್ಟಾರೆ ಟೆಂಡರ್ ಮೊತ್ತದ ಶೇ.1 ರಷ್ಟು) ಯನ್ನು ಗುತ್ತಿಗೆದಾರರಿಂದ ಪಡೆದಿದ್ದು, ಗುತ್ತಿಗೆ ಕರಾರು ಚಾಲ್ತಿಯಲ್ಲಿರುತ್ತದೆ.
ದಿನಾಂಕ: 21.11.2008 ರಂದು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಹಾಗೂ ಗುತ್ತಿಗೆದಾರರು ಸದರಿ ಯೋಜನೆಯ ನಿವೇಶನಕ್ಕೆ ಮಣ್ಣಿನ ಪರೀಕ್ಷೆಗಾಗಿ ಗುಂಡಿ ತೋಡಲು ಯಂತ್ರೋಪಕರಗಳೋಂದಿಗೆ ಹೋದಾಗ ಭೂ ಮಾಲೀಕರು ಯಂತ್ರಗಳಿಗೆ ಬೆಂಕಿ ಹಚ್ಚಿ, ಗಲಾಟೆ ಮಾಡಿ ಅಡಚಣೆ ಉಂಟು ಮಾಡಿರುತ್ತಾರೆ.	
ದಿನಾಂಕ: 18.11.2010 ರಂದು ಸನ್ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸದರಿ ಕಾಮಗಾರಿಯನ್ನು ಪ್ರಾರಂಭಿಸಲು ಸೂಚನೆ ನೀಡಲಾಗಿದೆ.	
ದಿನಾಂಕ: 08.06.2011 ರಂದು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ ರೈತರ ರಿಟ್ ಅಪೀಲ್‌ಗಳು ವಜಾಗೊಂಡಿರುತ್ತವೆ.	
ಭೂ ಪರಿಹಾರ ಮೊತ್ತ ರೂ.52.00 ಕೋಟಿಗಳು ಸರ್ಕಾರದಿಂದ ಬಿಡುಗಡೆಯಾಗಿರುತ್ತದೆ. ಈ ಮೊತ್ತದಲ್ಲಿ ಈವರೆವಿಗೂ 21.00 ಕೋಟಿಗಳನ್ನು ಭೂ ಪರಿಹಾರ ಮೊತ್ತವಾಗಿ 83 ಎಕರೆಗಳ ಭೂ ಮಾಲೀಕರಿಗೆ ಪಾವತಿಸಲಾಗಿದೆ. ಉಳಿದ 92 ಎಕರೆಗೆ ಸಂಬಂಧಿಸಿದಂತೆ ಸುಮಾರು 196 ಭೂ ಮಾಲೀಕರು ಪರಿಹಾರ ಪಡೆಯದೇ, ದಿನಾಂಕ: 21.11.2011ರಂದು ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದಲ್ಲಿ SLP (Civil) ದಾವೆ ಹೂಡಿರುತ್ತಾರೆ.	
ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದರಿ ಕಾಮಗಾರಿಯನ್ನು ಪ್ರಾರಂಭಿಸಲು ಹಣ ಬಿಡುಗಡೆ ಮಾಡಲು ಒಪ್ಪಿರುವುದಿಲ್ಲ.	
ಕೇಂದ್ರ ಸರ್ಕಾರದಿಂದ ಸದರಿ ಕಾಮಗಾರಿಗೆ ಈವರೆವಿಗೆ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.	

ಈ ಯೋಜನೆಗೆ ಸಂಬಂಧಿಸಿದಂತೆ ರಾಜ್ಯದ ಆಯವ್ಯಯದಲ್ಲಿ 2007–08 ರಲ್ಲಿ ರೂ.55.00 ಕೋಟಿಗಳನ್ನು ಕಾಯ್ದಿರಿಸಲಾಗಿತ್ತು. 2008–09ರ ಆಯವ್ಯಯದಲ್ಲಿ ಯಾವುದೇ ಅನುದಾನವನ್ನು ಕಾಯ್ದಿರಿಸಲಾಗಿರುವುದಿಲ್ಲ. 2011–12ನೇ ಸಾಲಿನ ಆಯವ್ಯಯದಲ್ಲಿ ರೂ.8.50 ಕೋಟಿಗಳನ್ನು ಕಾಯ್ದಿರಿಸಲಾಗಿದೆ.

ಸರ್ಕಾರವು ಸದರಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಸಂಬಂಧ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ರೂ.52.00 ಕೋಟಿಗಳ ಮೊತ್ತವನ್ನು ಬಿಡುಗಡೆ ಮಾಡಿರುತ್ತದೆ. ಇದೂವರೆವಿಗೆ ಅರ್ಚಕರ ಹಳ್ಳಿ ಗ್ರಾಮದಲ್ಲಿ 171.17 ಎಕರೆ ವಿಸ್ತೀರ್ಣದ ಜಮೀನನ್ನು ಭೂ ಸ್ವಾಧೀನಪಡಿಸಿಕೊಂಡಿದ್ದು, ಜಮೀನಿನ ಭೂ ಮಾಲೀಕರಿಗೆ ಪರಿಹಾರದ ಮೊಬಲಗನ್ನು ಪಾವತಿಸಲು ಸದರಿ ಮಂಡಳಿಯು ರೂ.48.10 ಕೋಟಿ ಬಿಡುಗಡೆ ಮಾಡಿದ್ದು, ಇದರಲ್ಲಿ ಇದೂವರೆವಿಗೆ ಭೂಮಾಲೀಕರಿಗೆ 81 ಎಕರೆ 09 ಗುಂಟೆ ವಿಸ್ತೀರ್ಣದ ಜಮೀನಿಗೆ ರೂ.20,33,49,888/– ಗಳನ್ನು ಪಾವತಿಸಲಾಗಿದ್ದು, ಖರ್ಚಾಗದೇ ಬಾಕಿ ಇರುವ ಮೊತ್ತ ರೂ.27,76,50,112/– ರಷ್ಟಿರುತ್ತದೆ.

ಈವರೆವಿಗೂ ಬೆಂಗಳೂರು–ಮೈಸೂರು ಹೆದ್ದಾರಿಯಿಂದ ಮೆಡಿಕಲ್ ಕಾಲೇಜು ನಿವೇಶನದವರೆಗೆ 250 ಮೀಟರ್ ಉದ್ದಕ್ಕೆ ಮಣ್ಣಿನ ಏರಿಯಾ ಸಂಪರ್ಕ ರಸ್ತೆ ನಿರ್ಮಿಸಲಾಗಿದೆ. ಮೆಡಿಕಲ್ ಕಾಲೇಜು ಆವರಣದಲ್ಲಿ leveling ಗಾಗಿ ಮಣ್ಣಿನ ಅಗೆತದ ಕಾಮಗಾರಿ ನಿರ್ವಹಿಸಲಾಗಿದೆ. ಕಟ್ಟಡಗಳ ಅಡಿಪಾಯಕ್ಕಾಗಿ ಮಣ್ಣಿನ ಪರೀಕ್ಷೆ ಕಾರ್ಯ ಕೈಗೊಳ್ಳಲಾಗಿದೆ. 216 ಎಕರೆ 24 ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ Total Station Survey, Block level survey ಕಾರ್ಯ ಕೈಗೊಳ್ಳಲಾಗಿದೆ. ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಯೋಜನೆಯ ಮಾಸ್ಟರ್ ಪ್ಲಾನ್ ಲೇ–ಔಟ್‌ನ 1.80 ಮೀಟರ್ X 1.80 ಮೀಟರ್ ಅಳತೆಯ ಮಾಡೆಲ್ ತಯಾರಿಸಲಾಗಿದೆ.

ಪ್ರಸ್ತಾಪಿತ ಭೂ ಸ್ವಾಧೀನ ಕ್ರಮವನ್ನು ಪ್ರಶ್ನಿಸಿ ಕೆಲವು ಭೂ ಮಾಲೀಕರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ ರಿಟ್ ಅರ್ಜಿ ಸಂಖ್ಯೆ: 18228, 15700, 11133, 11135 ಮತ್ತು 12670/2007 ಪ್ರಕರಣಗಳಲ್ಲಿ ರಿಟ್ ಅರ್ಜಿಯನ್ನು ವಜಾಗೊಳಿಸಿ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 30.07.2008 ರಂದು ಆದೇಶ ಮಾಡಿರುತ್ತದೆ.

ಸದರಿ ಆದೇಶವನ್ನು ಪ್ರಶ್ನಿಸಿ ದಾಖಲಾಗಿದ್ದ ರಿಟ್ ಅಪೀಲ್ ಸಂಖ್ಯೆ:1360 c/w 1370, 2224-2240/2008, 773-789/2009, 1371/2008, 1372/2008 ಮತ್ತು 2892/2009ರ ಪ್ರಕರಣಗಳಲ್ಲಿನ ಮೇಲ್ಮನವಿಯು ಸಹಾ ವಜಾಗೊಂಡಿದ್ದು, ಈ ಆದೇಶವನ್ನು ಪ್ರಶ್ನಿಸಿ ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್.ಎಲ್.ಪಿ ದಾಖಲಾಗಿದ್ದು ಪ್ರಕರಣ ಸಂಖ್ಯೆ: ಎಸ್ಎಲ್ಪಿ (ಸಿವಿಲ್) 27778–27816/2001 ರಲ್ಲಿ ಒಳಗೊಂಡಿರುವ ಸುಮಾರು 88–32 ಎಕರೆ ಜಮೀನಿಗೆ ಸಂಬಂಧಿಸಿದಂತೆ ಯಥಾಸ್ಥಿತಿ ಕಾಪಾಡುವಂತೆ ದಿನಾಂಕ: 21.11.2011ರಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಮಧ್ಯಂತರ ಆದೇಶವನ್ನು ನೀಡಿರುತ್ತದೆ. ಈ ಕಾರಣ ದಿಂದಾಗಿ ಉದ್ದೇಶಿತ ಯೋಜನೆಯ ಅಭಿವೃದ್ಧಿ ಕಾರ್ಯಗಳಿಗೆ ಅತ್ಯಾವಶ್ಯಕವಾಗಿ ಹಾಗೂ ತುರ್ತಾಗಿ ಬೇಕಾಗಿರುವ ಜಮೀನಿನಲ್ಲಿ ಅಭಿವೃದ್ಧಿ ಚಟುವಟಿಕೆಗಳು ಸ್ಥಗಿತಗೊಂಡಿರುತ್ತವೆ.

ಪ್ರಮುಖವಾಗಿ ಮಾನ್ಯ ಸದಸ್ಯರು ಹೇಳಿದಂಥ ವಿಚಾರಗಳು ಸರಿಯಾಗಿವೆ. 2007ರಲ್ಲಿ ಸರ್ಕಾರ ಇದಕ್ಕೆ ಆಡಳಿತಾತ್ಮಕ ಮಂಜೂರಾತಿ ಯನ್ನು ಕೊಟ್ಟಿರುವುದು ನಿಜ. ಇದಾದ ನಂತರ ಇದಕ್ಕೆ ಸಂಬಂಧಪಟ್ಟಂತೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವಂಥ ಕೆಲಸ 2007ರಲ್ಲಿ ಪ್ರಾರಂಭವಾಯಿತು. ಒಟ್ಟು 247 ಎಕರೆ 20 ಗುಂಟೆ ಜಮೀನನ್ನು ಇದೇ ಪ್ರದೇಶದಲ್ಲಿಯೇ ಬೇಕೆಂದು earmark ಮಾಡತಕ್ಕಂತ ಕೆಲಸ ಕೂಡ ಆಯಿತು.

ಇದರಲ್ಲಿ ವಿಶೇಷವಾಗಿ ರಾಜೀವ್ ಗಾಂಧಿ ಆರೋಗ್ಯ ವಿಶ್ವ ವಿದ್ಯಾನಿಲಯಕ್ಕೆ 71.15 ಎಕರೆ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ ಆಸ್ಪತ್ರೆ ಮತ್ತು ಬೇರೆ ಬೇರೆ ವಿಚಾರಗಳಿಗೋಸ್ಕರವಾಗಿ 145.09 ಎಕರೆ ಜಮೀನನ್ನು earmark ಮಾಡಲಾಯಿತು. ಇದಾದ ನಂತರದಲ್ಲಿ ಭೂಮಿಯನ್ನು ಅಕ್ವೈರ್ ಮಾಡುವಂತಹ ಸಂದರ್ಭದಲ್ಲಿ ಸಮಸ್ಯೆಗಳು ನಿರ್ಮಾಣ ಮಾಡುವಂತಹ ಸಂದರ್ಭದಲ್ಲಿಯೇ ಇದು ನ್ಯಾಯಾಲಯಕ್ಕೆ ಹೋಯಿತು. ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಇದಕ್ಕೆ ಸಂಬಂಧಪಟ್ಟ ಹಾಗೆ ದಾವೆಗಳು ಬಂತು. ಆರೋಗ್ಯ ವಿಶ್ವವಿದ್ಯಾನಿಲಯದ ಬಗ್ಗೆ ಟೆಂಡರ್ ಅನ್ನು ಕರೆದರು. ಅದರ ಪ್ರಕಾರವೇ 3 ಜನರು ಟೆಂಡರ್‌ನಲ್ಲಿ ಭಾಗವಹಿಸಿದರು. ಆ ಮೂರು ಜನರಲ್ಲಿ ನಾಗಾರ್ಜುನ ಕನ್‌ಸ್ಟ್ರಕ್ಷನ್ಸ್‌ರವರು ಲೋಯೆಸ್ಟ್ ಇದ್ದಾರೆಂದು ಹೇಳಿ ಅವರಿಗೆ

337.77 ಕೋಟಿ ರೂಪಾಯಿಗಳಿಗೆ ಟೆಂಡರ್ accept ಆದ ಮೇಲೆ 10% mobilization advance ಅನ್ನು ಕೊಟ್ಟರು. ಟೆಂಡರ್ ಪ್ರಕಾರದಲ್ಲಿ ಏನಿದೆ ಎಂದರೆ, ಭೂಮಿಯನ್ನು ಯಾವತ್ತು ವಹಿಸಿಕೊಡುತ್ತಾರೊ ಅಲ್ಲಿಂದ 18 ತಿಂಗಳೊಳಗಾಗಿ ಅದನ್ನು ಮುಗಿಸಬೇಕೆಂದು tender condition ಆಗಿದೆ. ಭೂಮಿಯನ್ನು ಕೊಡುವುದಕ್ಕೆ ಸಾಧ್ಯವಾಗದ ಪರಿಸ್ಥಿತಿ ಏತಕ್ಕಾಗಿ ಆಯಿತು ಎಂದರೆ ಇದು ನ್ಯಾಯಾಲಯದಲ್ಲಿದೆ. ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಈ ಭೂಮಿಗೆ ಸಂಬಂಧಪಟ್ಟ ಹಾಗೆ ದಾವೆಗಳನ್ನು ಹೂಡಲಾಗಿತ್ತು. ಅಲ್ಲಿ 280 ಜನ ಖಾತೆದಾರರು ಅವರಿಂದ 175 ಎಕರೆ 15 ಗುಂಟೆ ಜಮೀನನನ್ನು acquire ಮಾಡಿಕೊಳ್ಳುವುದಕ್ಕೋಸ್ಕರವಾಗಿ KIADBಯವರು notification ಅನ್ನು ಮಾಡಿದರು. ನ್ಯಾಯಾಲಯದಲ್ಲಿ ಈ ಭೂಮಿಯ ಪಕ್ಕದಲ್ಲಿಯೇ 1200 ಎಕರೆ ಸರ್ಕಾರಿ ಭೂಮಿ ಇರುವುದರಿಂದ ನಮ್ಮ ಭೂಮಿಯನ್ನು ಏತಕ್ಕಾಗಿ acquire ಮಾಡುತ್ತಿದ್ದೀರೆಂದು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಒಂದು ದಾವೆಯನ್ನು ಹೂಡಿದರು. ಇದು ಆದ ಮೇಲೆ ದಾವೆ ವಜಾ ಆದ ನಂತರದಲ್ಲಿ ಮತ್ತೊಂದು ಬಾರಿ ಅವರು ಮೇಲ್ಮನವಿ ಹೋದರು. 2011 ಜೂನ್‌ನಲ್ಲಿ ಅದು ಇತ್ಯರ್ಥವಾಯಿತು. ಅದು ಆದ ಮೇಲೆ ಇದಕ್ಕೆ ಸಂಬಂಧಪಟ್ಟ ಹಾಗೆ ಎರಡು ಸಭೆಗಳನ್ನು ಮಾಡಿದೆವು. ಈಗಿರುವಂತಹ contractorಗೆ ಭೂಮಿಯನ್ನು ವಹಿಸಿಕೊಡಬೇಕೆನ್ನುವಂತಹ ವಿಚಾರವಾಗಿ ಎರಡು ಸಭೆಗಳು ಆಯಿತು. ಮತ್ತೊಂದು ಬಾರಿಗೆ ಇದು ಕರ್ನಾಟಕ ಹೈಕೋರ್ಟಿನಲ್ಲಿ ದಿನಾಂಕ:8.6.2011ರಲ್ಲಿ ಇದು dismiss ಆದ ನಂತರದಲ್ಲಿ 196 ಖಾತೆದಾರರಿಗೆ ಒಟ್ಟು 83 ಎಕರೆ ಪ್ರದೇಶಕ್ಕೆ ಸಂಬಂಧಪಟ್ಟ ಹಾಗೆ ಈಗಾಗಲೇ ಅವರು Supreme Courtನಲ್ಲಿ ದಾವೆಯನ್ನು ಹೂಡಿದ್ದಾರೆ. ಮತ್ತೆ Supreme Court ನಲ್ಲಿ ದಿನಾಂಕ: 21-11-2011 ರಲ್ಲಿ ಸರ್ವೋಚ್ಚ ನ್ಯಾಯಾಲಯ ತಡೆಯಾಜ್ಞೆ ಕೊಡುವುದರ ಮುಖಾಂತರ ಅವರು ಸ್ಪಷ್ಟವಾಗಿ ಹೇಳಿದ್ದಾರೆ. This would necessarily mean that neither the party shall alter the present character of the property or alienate the same to any other person in any manner whatsoever, ಎಂದು ಕೊಟ್ಟಿದ್ದಾರೆ. ಅಂದರೆ ಈಗ ನಮ್ಮಲ್ಲಿ ಆ 146 ಎಕರೆ ಪ್ರದೇಶ ಏನಿದೆ, ನಮ್ಮಲ್ಲಿ ಇರುವ ಕೇವಲ 83 ಎಕರೆ ಪ್ರದೇಶ. ಆದರೆ

ಹಿರಿಯರಾದ ಮಾನ್ಯ ರೇವಣ್ಣನವರು ಒಂದು ಮಾತನ್ನು ಹೇಳಿದರು. ಇರುವ ಭೂಮಿಯಲ್ಲಿ ಏಕೆ ಮಾಡುವುದಕ್ಕಾಗುವುದಿಲ್ಲ. ಇದರ ನಕ್ಷೆ ಹೀಗಿದೆ. ಇಲ್ಲಿ ಯಾವ್ಯಾವುದೋ ಪ್ರದೇಶದಲ್ಲಿರತಕ್ಕಂಥ ಭೂಮಿಯನ್ನು acquire ಮಾಡಿ ಕೊಂಡಿರುತ್ತೇವೆ. 3,4,8.10 ಎಕರೆಯಂತೆ ಹೀಗೆ acquire ಮಾಡಿಕೊಂಡಿ ರುತ್ತೇವೆ. ಯಾವುದೂ compact ಇಲ್ಲ. ಅಂತಹ ಸಂದರ್ಭದಲ್ಲಿ ರಾಜೀವ್ ಗಾಂಧಿ ವಿಶ್ವವಿದ್ಯಾಲಯ ಸಿಂಡಿಕೇಟ್ ತನ್ನದೇ ಆದ ಒಂದು ಪವರ್‌ನ್ನು ಹೊಂದಿದೆ. ಅವರು ಸಂಪೂರ್ಣವಾಗಿ ಭೂಮಿಯನ್ನು hand over ಮಾಡುವವರೆಗೂ ಕೂಡ ಹಣವನ್ನು release ಮಾಡುವುದಿಲ್ಲವೆಂದು ಹಣವನ್ನು release ಮಾಡಿಲ್ಲ. ಎರಡನೆಯದಾಗಿ ಆಸ್ಪತ್ರೆಗೆ ಸಂಬಂಧಪಟ್ಟ ಹಾಗೆ ಕೇಂದ್ರ ಸರ್ಕಾರದ ಒಂದು consent ಇದರಲ್ಲಿ ಇದೆ ಎಂದು ಹೇಳಿ ಅದರ ಆಧಾರದ ಮೇಲೆ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಮತ್ತು ರಾಜೀವ್ ಗಾಂಧಿ ವಿಶ್ವವಿದ್ಯಾಲಯ ಮೂರು ಸೇರಿ ಆ ದೃಷ್ಟಿಯಿಂದ ಈಗಾಗಲೇ ಆ ವಿಚಾರವನ್ನು ಅವರು ಕೇಳಿದರು. ರಾಜೀವ್‌ಗಾಂಧಿ ವಿಶ್ವವಿದ್ಯಾಲಯ ಇರಲಿ ಅಥವಾ ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆ ಮಾಡುವಂಥ ಕೆಲಸ ಈಗ ಆಗಿಲ್ಲ. ಹಾಗಾಗಿ ಇದು Supreme Court ನಲ್ಲಿರುವುದರಿಂದ ನಮಗೆ ಮುಂದುವರೆಯುವುದಕ್ಕೆ ಆಗದಿರುವಂಥ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಹಾಗಾಗಿ Supreme Court Judgmentನ ಆಧಾರದ ಮೇಲೆ ನಾವು ಕೆಲಸವನ್ನು ಮುಂದುವರೆಸುವುದಕ್ಕಾಗಿರುವುದಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಒಂದು Statement ನ್ನು ಮಾಡಿ ಕಳುಹಿಸಿ ಕೊಟ್ಟಿದ್ದಾರೆ. ಮೊನ್ನೆ ತಾವು ಹೇಳಿದಿರಿ, ನಿನ್ನೆ ಚರ್ಚೆಯಾಗಿದೆ. ಇದನ್ನು ನಿಯಮ-69ರಲ್ಲಿ ಚರ್ಚೆ ಮಾಡಬೇಕೆಂದು ಹೇಳಿ, ಬೆಳಗಾಂ ಅಧಿವೇಶನದಲ್ಲಿ ಮಾಜಿ ಮುಖ್ಯಮಂತ್ರಿಗಳು ಕೊಟ್ಟಿರುವಂಥದ್ದನ್ನು ಅವರ ಗಮನಕ್ಕೆ ತರುತ್ತಿದ್ದೇನೆ. ಮಾಜಿ ಮುಖ್ಯಮಂತ್ರಿಗಳು ಹೇಳಿರುವಂಥದ್ದನ್ನು ತಮ್ಮ ಗಮನಕ್ಕೂ ತರುತ್ತೇನೆ. ಅಲ್ಲಿ ಒಟ್ಟು ಜಮೀನು ಯಾವ್ಯಾವುದರಲ್ಲಿ ಆಗಿದೆ ಎನ್ನುವಂಥದ್ದು ನಾನು ತಮ್ಮ ಗಮನಕ್ಕೆ ತರಬೇಕಾಗುತ್ತದೆ.

ಶ್ರೀ ಬಿ.ಎನ್.ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, this matter is ceased in the Supreme Court. How could you ask ಈ ತರಹ ಇದೆ ಎಂದು ಹೇಳಿ. This is not correct.

(ಗೊಂದಲ)

ಅಧ್ಯಕ್ಷರು : ತಾವು Clarification ನ್ನು ಕೇಳಿ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ನಾನು Supreme Court limitations ಬಗ್ಗೆ ಮಾತನಾಡುತ್ತಿಲ್ಲ. ಅದನ್ನು question ಮಾಡುತ್ತಿಲ್ಲ.

(ಗೊಂದಲ)

ಶ್ರೀ ಬಿ.ಎನ್.ಬಚ್ಚೇಗೌಡ : Judiciary is ceased of the matter. ಅದನ್ನು ಇಲ್ಲಿ ಚರ್ಚೆ ಮಾಡಿದರೆ ಹೇಗೆ?

ಅಧ್ಯಕ್ಷರು : ಚರ್ಚೆಗೆ ಅವಕಾಶ ಇರುವುದಿಲ್ಲ. ಬೇಕಾದರೆ ತಾವು clarification ಕೇಳಿ.

ಶ್ರೀ ಬಿ.ಎನ್.ಬಚ್ಚೇಗೌಡ : Latest Supreme Court decision ಆಗಿದೆ. ಬೆಳಗಾಂ ನಲ್ಲಿ ಆಗಿರುವುದು, ಹಿಂದೆ ಏನಾಯಿತು ಎನ್ನುವುದನ್ನು ಹೇಳಿಕೊಂಡು ಹೋದರೆ ಹೇಗೆ?

(ಗೊಂದಲ)

ಶ್ರೀ ಬಿ.ಎನ್.ಬಚ್ಚೇಗೌಡ : ತಾವು latest ನೋಡಿ.

ಶ್ರೀ ಹೆಚ್.ಡಿ.ರೇವಣ್ಣ : ನಾನು latest ಮೇಲೆಯೇ ಮಾತನಾಡುತ್ತಿರುವುದು. Supreme Court ನಲ್ಲಿ ಆಗಿರುವ ಬಗ್ಗೆ ನಾನು question ಮಾಡುವುದಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : The Highest Court is ceased of the matter.

ಶ್ರೀ ಹೆಚ್.ಡಿ.ರೇವಣ್ಣ : Highest ಕೋರ್ಟ್ ಬಗ್ಗೆ ನನಗೆ ಗೌರವ ಇದೆ. ಆ ವಿಷಯದ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಅದನ್ನು ಬಿಟ್ಟು ನಾನು ಮಾತನಾಡುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ : ಹೇಗೆ ಮಾತನಾಡುವುದು?

ಅಧ್ಯಕ್ಷರು : clarification ಮಾತ್ರ ಕೇಳಿ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ. ಅದಕ್ಕೋಸ್ಕರ Clarification ಕೇಳುವುದು. ನಾಳೆ ನಿಯಮ–69ರ ಮೇಲೆಯೂ ಇದೆ.

ಅಧ್ಯಕ್ಷರು : ನಾಳೆ ಚರ್ಚೆ ಇರುವುದರಿಂದ ಪುನಃ ಇವತ್ತು ಏಕೆ ಕೇಳುತ್ತಿದ್ದೀರಿ?

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ನೀವು ಹೇಳಿದ್ದೀರಿ. ಮೊನ್ನೆ ದಿವಸ ಉಪಾಧ್ಯಕ್ಷರು ಇದ್ದಾಗ ಅವರು ಸುಳ್ಳು ಮಾಹಿತಿ ಕೊಟ್ಟು ವೈದ್ಯಕೀಯ ಕಾಲೇಜು ಇಲ್ಲವೆಂದು ಹೇಳಿದರು. 80 ಕೋಟಿ ರೂ.ಗಳು ಕೇಂದ್ರ ಸರ್ಕಾರದ ಹಣ ಇಲ್ಲವೆಂದು ಹೇಳಿದರು. ಮೊನ್ನೆ ಉಪಾಧ್ಯಕ್ಷರು ಇದ್ದಾಗ ಅರ್ಧಗಂಟೆ ಚರ್ಚೆಗೆ ಕೊಡುತ್ತೇವೆಂದು ತಾವು ಹೇಳಿದ್ದೀರಿ. ನಿಯಮ–69ರಲ್ಲಿ ಹೇಳಿದ್ದೇನೆ. ಇದನ್ನು ಬೇಕಾದರೆ ನಾಳೆ ಬೆಳಿಗ್ಗೆ ತೆಗೆದುಕೊಳ್ಳಿ. ಬೇಕಾದರೆ ನಾನು Supreme Court ಬಗ್ಗೆ ಬಿಟ್ಟು ಮಾತನಾಡುತ್ತೇನೆ. ಏನೇನು ನಡೆದಿದೆ ಎನ್ನುವುದರ ಬಗ್ಗೆ ನಾನು ದಾಖಲೆ ಸಮೇತ ಕೊಡುತ್ತೇನೆ. ಸದನವನ್ನು ತಪ್ಪು ದಾರಿಗೆ ತರುವುದು ಬೇಡ. ಬೇಕಾದರೆ ನಾಳೆ ಬೆಳಿಗ್ಗೆ ತೆಗೆದುಕೊಳ್ಳಿ. ದಾಖಲೆ ಸಮೇತ ಕೊಡುತ್ತೇನೆ.

(ಗೊಂದಲ)

ಶ್ರೀ ಎಸ್.ಎ. ರಾಮದಾಸ್ : ನಾನು ಬರವಣಿಗೆಯಲ್ಲಿ ಕೊಟ್ಟಿರುತ್ತೇನೆ. ಸದನಕ್ಕೆ ತಪ್ಪು ಮಾಹಿತಿ ಕೊಟ್ಟಿದ್ದಾರೆ. ಕ್ರಮ ತೆಗೆದುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : Supreme Court writ petition ಬಗ್ಗೆ ನನ್ನ ಹತ್ತಿರ copy ಇದೆ. ಆದೇಶದ copy ಯೂ ಇದೆ, ಬೇಕಾದರೆ ಅದರ ಬಗ್ಗೆಯೂ ಹೇಳುತ್ತೇನೆ. ಆಮೇಲೆ final decision ನೀವು ಕೊಡಿ. ಇದನ್ನು ಚರ್ಚೆ ಮಾಡುವುದಕ್ಕೆ ಕೊಡಿ ಸ್ವಾಮಿ.

(ಗೊಂದಲ)

ಅಧ್ಯಕ್ಷರು : ನೀವು Clarification ಕೇಳಿ.

ಶ್ರೀ ಹೆಚ್.ಡಿ. ರೇವಣ್ಣ: ಆಯಿತು ನಾಳೆ ಬೆಳಗ್ಗೆ ನಿಯಮ–69ರ ಮೇಲೆ ಚರ್ಚೆಗೆ ಕೊಡಿ.

ಅಧ್ಯಕ್ಷರು : ಆಯಿತು. ಮಾನ್ಯ ರಾಜುರವರೆ, ನೀವು ಸಹಿ ಮಾಡಿಲ್ಲ. ತಾವು ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ನಾನು ನಿಮ್ಮ ಗಮನಕ್ಕೆ ತರುತ್ತೇನೆ. ಆಮೇಲೆ ನೀವು ಏನು ಬೇಕಾದರೂ ತೀರ್ಮಾನ ಕೊಡಿ.

ಶ್ರೀ ಹೆಚ್. ರಾಜು : ಸರ್, ಒಂದು ನಿಮಿಷ.

ಅಧ್ಯಕ್ಷರು : ನನ್ನ ಹತ್ತಿರ ಇದೆ, ಅದಕ್ಕೆ ನೀವು ಸಹಿ ಮಾಡಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಏನು ಸರ್?

ಅಧ್ಯಕ್ಷರು : ಇದಕ್ಕೆ ರಾಜು ಅವರು ಸಹಿ ಮಾಡಿರುವುದಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ನಾಳೆ ಬೆಳಗ್ಗೆ ನಿಯಮ-9ರ ಮೇಲೆ ಚರ್ಚೆಗೆ ಕೊಡಿ ಸರ್.

ಅಧ್ಯಕ್ಷರು : ಆಯಿತು. ಶ್ರೀ ಎ.ಎಸ್. ಪಾಟೀಲ್ ರವರು.

2. **ವಿಷಯ : ದೇವರ ಹಿಪ್ಪರಗಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವ ಬಗ್ಗೆ.**

ಶ್ರೀ ಎ.ಎಸ್. ಪಾಟೀಲ್, ನಡಹಳ್ಳಿ (ದೇವರ ಹಿಪ್ಪರಗಿ) : ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರ ದೇವರ ಹಿಪ್ಪರಗಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೆ ಏರಿಸುವುದರ ಬಗ್ಗೆ ಮಾನ್ಯ ಸಚಿವರ ಗಮನವನ್ನು ತಮ್ಮ ಮೂಲಕ ಎಳೆಯುವುದಕ್ಕೆ ಬಯಸುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ,

ಮಾರ್ಗಸೂಚಿಗಳ ಪ್ರಕಾರ, ಬಿಜಾಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿಗೆ 2 ಸಮುದಾಯ ಆರೋಗ್ಯ ಕೇಂದ್ರಗಳ ಸ್ಥಾಪನೆಗೆ ಅವಕಾಶವಿದೆ. ಆದರೆ, ಈಗಾಗಲೇ ಸದರಿ ತಾಲ್ಲೂಕಿನಲ್ಲಿ 3 ಸಮುದಾಯ ಆರೋಗ್ಯ ಕೇಂದ್ರಗಳು ಅಂದರೆ, ಆಲ್ ಮೇಲ್, ಕಲಕೇರಿ ಮತ್ತು ಮರಟಗಿಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಇದಲ್ಲದೆ, ಸಿಂಧಗಿಯಲ್ಲಿ 100 ಹಾಸಿಗೆಗಳ ತಾಲ್ಲೂಕು ಆಸ್ಪತ್ರೆ ಸಹ ಕಾರ್ಯನಿರ್ವಹಿಸುತ್ತಿದೆ.